ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ
2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣದ ಹತ್ತಿರ,
ಕೆಂಪೇಗೌಡ ರಸ್ತೆ, ಬೆಂಗಳೂರು– 560 009. ದೂರವಾಣಿ ಸಂ: 22114233.

KPLC/ACT/BUD/37/12-13 ದಿನಾಂಕಃ 29 01 2013

## ಅಧಿಕೃತ ಜ್ಞಾಪನ

ವಿಷಯಃ ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ
1 ಸರ್ಕಾರದ ಆದೇಶ ಕ್ರಮಾಂಕಃ ಆರ್.ಡಿ 649 ಎಲ್.ಜಿ.ಬಿ 2012, ದಿನಾಂಕಃ 01.10.2012 ಹಾಗೂ ಪರಿಷ್ಕೃತ ಆದೇಶ ದಿನಾಂಕಃ 16.10.2012.
2 ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ ಇವರ ಪತ್ರ ಸಂಖ್ಯೆ LND/CR/154/12-13, 07.12.2013.
3 ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಪತ್ರ ಸಂಖ್ಯೆ LND/1/CR/169/10-11, ದಿನಾಂಕಃ 26.12.2012.
4 ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರ ಪತ್ರ ಸಂಖ್ಯೆ ಕಂದಾಯಃಅತಿಕ್ರಮಣ 18/12-13, ದಿನಾಂಕಃ 06.12.2012.
5 ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರ ಪತ್ರ ಸಂಖ್ಯೆ ಸ.ಭೂ.ಸಂ 47/12-13, ದಿನಾಂಕಃ 28.12.2012.
6 ಈ ನಿಗಮದ ಸಂಮ ಸಂಖ್ಯೆಯ ಅಧಿಕೃತ ಜ್ಞಾಪನ ದಿನಾಂಕಃ 18.12.2012.

***

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿಯಮಿತ ಇವರಿಗೆ 2012-13ನೇ ಸಾಲಿನ ಆಯವ್ಯಯದಲ್ಲಿ ರೂ. 1000.00 ಲಕ್ಷಗಳಅನುದಾನವನ್ನು ಒದಗಿಸಲಾಗಿದ್ದು, ಈ ಪೈಕಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಅವಧಿಗೆ ರೂ. 450.00(ನಾಲ್ಕು ನೂರಾ ಐವತ್ತು ಲಕ್ಷಗಳು ಮಾತ್ರ)ಗಳನ್ನು ಅನುದಾನಕ್ಕಾಗಿ ಹಾಗೂ ರೂ. 50.00(ಐವತ್ತು ಲಕ್ಷಗಳನ್ನು)ಗಳನ್ನು ವೇತನ ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ಒಟ್ಟು ರೂ. 500.00 ಲಕ್ಷಗಳನ್ನು (ರೂಪಾಯಿ ಐದು ನೂರು ಲಕ್ಷಗಳು ಮಾತ್ರ )ಉಲ್ಲೇಖಿತ ಸರ್ಕಾರದ ಆದೇಶ ಕ್ರಮಾಂಕಃ ಆರ್.ಡಿ 649 ಎಲ್.ಜಿ.ಬಿ 2012, ದಿನಾಂಕಃ 01.10.2012ರಲ್ಲಿ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಉಲ್ಲೇಖ (3)ರಿಂದ(5)ರ ಪತ್ರಗಳಲ್ಲಿ ಅನುಕ್ರಮವಾಗಿ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆ, ಬಳ್ಳಾರಿ ಜಿಲ್ಲೆ ಮತ್ತು ಹಾಸನ ಜಿಲ್ಲೆ ಇವರುಗಳು, ತಮ್ಮ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನುಗಳ ರಕ್ಷಣೆಯ ಸಲುವಾಗಿ ಅನುದಾನವನ್ನು ಈ ನಿಗಮದಿಂದ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ. ಆದ್ದರಿಂದ, ಸದರಿ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ ಈ ಮುಂದಿನಂತೆ ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಬಿಡುಗಡೆ ಮಾಡಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ಚಾಮರಾನಗರ ಜಿಲ್ಲೆ | ರೂ.10.00 |
| 2. | ಮೈಸೂರು ಜಿಲ್ಲೆ | ರೂ.20.00 |
| 3. | ಬಳ್ಳಾರಿ ಜಿಲ್ಲೆ | ರೂ.10.00 |
| 4. | ಹಾಸನ ಜಿಲ್ಲೆ | ರೂ.10.00 |

<u>ಷರತ್ತುಗಳು</u>

(ಅ) ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗದೆಯೋ ಆ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದು ಹಾಗೂ ಅನ್ಯ ಉದ್ದೇಶಕಗಳಿಗೆ ಬಳಸತಕ್ಕದ್ದಲ್ಲ.

(ಆ) ಬಿಡುಗಡೆ ಮಾಡಿರುವ ಅನುದಾನ ವೆಚ್ಚ ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ, 1999 ಇದರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

(ಇ) ಅನುದಾನ ಬಳಕೆ ಮಾಡಿದ 30 ದಿನಗಳೊಳಗಾಗಿ ವಿನಿಯೋಗ ಪತ್ರವನ್ನು (Utilization Certificate) ಅಗತ್ಯ ವಿವರ ಹಾಗೂ ವರದಿಗಳೊಂದಿಗೆ ಈ ನಿಗಮಕ್ಕೆ ಸಲ್ಲಿಸತಕ್ಕದ್ದು.

(ಈ) 2012-13ನೇ ಹಣಕಾಸಿನ ವರ್ಷದ ಅಂತ್ಯಕ್ಕೆ ಖರ್ಚು-ವೆಚ್ಚಗಳ ತಃಖ್ತೆಯನ್ನು ತಪ್ಪದೇ ಸಲ್ಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿಯಮಿತ,
ಬೆಂಗಳೂರು

ಪ್ರತಿಯನ್ನು

1. ಮಹಾ ಲೇಖ ಪಾಲರು (ಲೆಕ್ಕ ಪತ್ರ / ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು
3. ಖಜಾನೆ ನಿರ್ದೇಶಕರು, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
4. ನಿರ್ದೇಶಕರು, ಎನ್.ಐ.ಸಿ., ಖನಿಜ ಭವನ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ / ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7), ವಿಧಾನ ಸೌಧ, ಬೆಂಗಳೂರು
7. ಅಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
8. ಲೆಕ್ಕಾಧಿಕಾರಿಗಳು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ಬೆಂಗಳೂರು.
9. ಹೆಚ್ಚುವರಿ ಪ್ರತಿ

***